

ಬೆಂಗಳೂರಿನ 'ಪರಿಜ್ಮ'ದಲ್ಲಿ ಆಟಿಸಂ ಮಕ್ಕಳಿಗೆ ಥೆರಪಿ ನೀಡುತ್ತಿರುವುದು

# ಆಟಿಸಂ

## ಮಕ್ಕಳ ಬುದ್ಧಿವಿಕಾಸಕ್ಕೆ ಸವಾಲು

**ಆಟಿಸಂ ಎಂದರೆ ಮಕ್ಕಳಲ್ಲಿ ಕಂಡುಬರುವ ಒಂದು ರೀತಿಯ ಮಾನಸಿಕ ಅಸ್ವಸ್ಥತೆ. ನರಮಂಡಲದ ಬೆಳವಣಿಗೆಯಲ್ಲಿ ನ್ಯೂನತೆ ಉಂಟಾಗುವುದರಿಂದ ಬರುವ ಈ ಸಮಸ್ಯೆಗೆ ಸೂಕ್ತ ಥೆರಪಿಯ ಅವಶ್ಯಕತೆ ಇದೆ.**

■ **ಉಮಾ ಅನಂತ್**

ಬೆಂಗಳೂರಿನ ಐದು ವರ್ಷದ ಐಸಿರಿಗೆ ಆಟಿಸಂ ಸಮಸ್ಯೆ. ದೈಹಿಕವಾಗಿ ಚೆನ್ನಾಗಿಯೇ ಇರುವ ಐಸಿರಿ, ಮಾನಸಿಕವಾಗಿ ಮಂಕು. ಯಾರ ಜೊತೆಗೂ ಬೆರೆಯಲ್ಲ, ಮಾತನಾಡಲ್ಲ, ಈಕೆಗೆ ಮಾನಸಿಕ ಸಮಸ್ಯೆ ಇದೆ ಎಂಬುದನ್ನು ಗುರುತಿಸಿದ ತಂದೆ ತಾಯಿ, ಬೆಂಗಳೂರಿನ ವಿಲ್ಸನ್ ಗಾರ್ಡನ್‌ನಲ್ಲಿರುವ 'ಪರಿಜ್ಮ' ನ್ಯೂರೊ ಡಯಾಗ್ನಾಸ್ಟಿಕ್ ಅಂಡ್ ರಿಹ್ಯಾಬಿಲಿಟೇಶನ್ ಸೆಂಟರ್‌ನಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದಾರೆ. ಈಗ ಒಂದೂವರೆ ವರ್ಷದಿಂದ ಥೆರಪಿ ಪಡೆಯುತ್ತಿದ್ದು, ಐಸಿರಿ ಮಾನಸಿಕವಾಗಿ ತುಂಬ ಬದಲಾಗಿದ್ದಾಳೆ. ಸಹಜ ಮಕ್ಕಳಂತೆ ಚಟುವಟಿಕೆಗಳಲ್ಲಿ ತೊಡಗಲಾರಂಭಿಸಿದ್ದಾಳೆ.

ಮಕ್ಕಳಲ್ಲಿ ವಿವಿಧ ತೊಂದರೆಗಳು, ಹುಟ್ಟುವ ಸಂದರ್ಭದಲ್ಲಿ ಮೆದುಳಿಗೆ ಆಗುವ ಪೆಟ್ಟು ಮುಂತಾದವುಗಳಿಂದ ನರರೋಗ ಸಮಸ್ಯೆ ಬರುತ್ತದೆ. ಈ ತೊಂದರೆಯಿಂದ ಮಕ್ಕಳಿಗೆ ಸಾಮಾಜಿಕವಾಗಿ ಒಂದು ರೀತಿಯ 'ಭಯ' ಉಂಟಾಗುತ್ತದೆ. ಆಟಿಸಂ ತೊಂದರೆ ಇರುವ ಮಕ್ಕಳು ಇತರ ನಾರ್ಮಲ್ ಮಕ್ಕಳೊಂದಿಗೆ ಬೆರೆಯುವಲ್ಲಿ, ಸಂವಹನ ಮಾಡುವಲ್ಲಿ ಅಸಮರ್ಥರಾಗಿರುತ್ತಾರೆ. ಏಕಾಗ್ರತೆ ಕೊರತೆ, ದೃಷ್ಟಿಯಲ್ಲಿ ಮಂದ, ಮಾತನಾಡಲು ಸಾಧ್ಯವಾಗದೇ ಇರುವಂತಹ ತೊಂದರೆಗಳನ್ನೂ ಎದುರಿಸುತ್ತಾರೆ. ವೈದ್ಯಕೀಯ ಪರಿಭಾಷೆಯಲ್ಲಿ 'ಆಟಿಸಂ' ಎನಿಸಿಕೊಳ್ಳುವ ಈ ಸಮಸ್ಯೆಗೆ ಥೆರಪಿಯ ಅವಶ್ಯಕತೆಯಿದೆ.

### ಆಟಿಸಂನ ವಿಸ್ತೃತ ವಿವರಣೆ

ಮೆದುಳಿಗೆ ಸಂಬಂಧಪಟ್ಟಂತೆ ಮಕ್ಕಳಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಯೇ ಆಟಿಸಂ. ಮಕ್ಕಳ ಬುದ್ಧಿ ಸರಿಯಾಗಿ ಬೆಳೆದಿರುವುದಿಲ್ಲ. ಮಾತಿಗೆ ಪ್ರತಿಕ್ರಿಯಿಸುವುದಿಲ್ಲ. ನರಮಂಡಲದ ಬೆಳವಣಿಗೆಯಲ್ಲಿ ನ್ಯೂನತೆ, ಸಹಜತೆಯಲ್ಲಿ ಏರುಪೇರು ಇರುತ್ತದೆ. ಕೌಶಲ್ಯ ಸಮಸ್ಯೆ, ವರ್ತನೆ, ಗ್ರಹಿಕೆಗಳಲ್ಲಿ ದೋಷ ಆಟಿಸಂ ಮಕ್ಕಳಲ್ಲಿರುತ್ತದೆ.

ಹಲವಾರು ಮಾನಸಿಕ ನಡವಳಿಕೆಗಳು ಆಟಿಸಂಗೆ ಕಾರಣವಾಗುತ್ತದೆ. ಮುಖ್ಯವಾಗಿ

- ಸಂವಹನದ ಕೊರತೆ
- ವರ್ತನೆ ಹಾಗೂ ಭಾವನೆಗಳಲ್ಲಿ ವ್ಯತ್ಯಾಸ
- ಮಾತನಾಡಲು ತೊಂದರೆ
- ಗ್ರಹಿಕೆಯಲ್ಲಿ ನಿರಾಸಕ್ತಿ
- ಹಟ, ಕೋಪ, ವಿನಾಕಾರಣ ಕಿರುಚುವುದು ಇತ್ಯಾದಿ
- ಆನುವಂಶಿಕ ಸಮಸ್ಯೆ

ಎಷ್ಟೋ ಸಂದರ್ಭಗಳಲ್ಲಿ ಆಟಿಸಂ ಸಮಸ್ಯೆಗೆ ಇಂಥದ್ದೇ ಕಾರಣಗಳು ಎಂದು ನಿಖರವಾಗಿ ಹೇಳಲಾಗದು. ಆನುವಂಶಿಕವಾಗಿಯೂ ಇರಬಹುದು ಎಂಬುದನ್ನು ಅಂದಾಜು ಮೇರೆಗೆ ವೈದ್ಯರೇ ನಿರ್ಧರಿಸುತ್ತಾರೆ. ಪ್ರಮುಖವಾಗಿ ಕುಟುಂಬದ ಸದಸ್ಯರಲ್ಲಿ ಯಾರಿಗಾದರೂ ಈ